ದಿನಾಂಕ : 06.04.2022 ಓ.ಎಸ್ ನಂ.495/2012 ರಲ್ಲಿ
ಪಿ.ಡಬ್ಲ್ಯೂ-1(ಹರೀಶ್ ಪೂನಂ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಆರ್ ವಕೀಲರಿಂದಃ

ನಾನು ಪಿ.ಯು.ಸಿ. ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ ನಂಜಪ್ಪ ನನ್ನ ತಂದೆ. ಅವರು ಯಾವ ಉದ್ದೇಶಕ್ಕೆ ಈ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿದೆ. ಆಸ್ತಿಯನ್ನು ನನ್ನ ತಂದೆ ಪದ್ಮಾವತಿ ಎನ್ನುವವರಿಂದ ಖರೀದಿಸಿದ್ದು, ಕ್ರಯಪತ್ರವಾದ ಮೂರು ತಿಂಗಳುಗಳ ನಂತರ ಬೇರೆ ವ್ಯಕ್ತಿಗೆ ಪದ್ಮಾವತಿ ಮತ್ತು ಅವರ ಮಗ ಸೇರಿ ಸದರಿ ಆಸ್ತಿಯ ಬಗ್ಗೆ ಇನ್ನೊಂದು ಕ್ರಯಪತ್ರ ಮಾಡಿಕೊಟ್ಟಿದ್ದರು. ವಾದಪತ್ರವನ್ನು ನನ್ನ ತಂದೆ ಹೇಳಿ ಬರೆಸಿದ್ದರು. ದಾವಾ ಸ್ವತ್ತು ಕೆಂಚನಕುಪ್ಪೆ ಗ್ರಾಮಕ್ಕೆ ಸೇರಿದ ಸರ್ವೇ ನಂಬರ್ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತು ಸರ್ವೇ ನಂ.199 ಆಗಿತ್ತು, ಖರಾಬು ಸೇರಿ 3 ಎಕರೆ 35 ಗುಂಟೆ ಇದೆ. ದಾವಾ ಸ್ವತ್ತು ಮೂಲತಃ ಚಿಕ್ಕರಾಮಯ್ಯನವರಿಗೆ ಸೇರಿದ ಸ್ವತ್ತಾಗಿರುತ್ತದೆ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ದಿನಾಂಕ 21.12.1986 ರಂದು ಚಿಕ್ಕರಾಮಯ್ಯನವರಿಂದ ಖರೀದಿಸಿದ್ದರು ಎಂದರೆ ಸರಿ. ಕ್ರಯಪತ್ರವಾದ ನಂತರ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಸರಿ. ದಿನಾಂಕ 10.09.2004 ರಂದು 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು 5 ನೇ ಪ್ರತಿವಾದಿಗೆ ಕ್ರಯದ ಕರಾರು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಎಕರೆಗೆ 14 ಲಕ್ಷ ರೂಪಾಯಿಯಂತೆ ಒಟ್ಟು 47,62,000/- ರೂಪಾಯಿಗೆ ದಾವಾ ಸ್ವತ್ತಿನ ಬಗ್ಗೆ 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಕ್ರಯದ ಕರಾರು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳು ಕ್ರಯದ ಕರಾರು ಆದ ದಿನ 5 ನೇ ಪ್ರತಿವಾದಿಯಿಂದ 20 ಲಕ್ಷ ರೂಪಾಯಿ

ಮುಂಗಡ ಹಣ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕ 07.03.2007 ರಂದು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯಿಂದ ಉಳಿಕೆ 27,62,000/- ರೂಪಾಯಿ ಪಡೆದುಕೊಂಡು ಸಾಮಾನ್ಯ ಅಧಿಕಾರ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳು ತಮಗೆ ದಾವಾ ಸ್ವತ್ತಿನ ಮೇಲಿದ್ದ ಹಕ್ಕನ್ನು 5 ನೇ ಪ್ರತಿವಾದಿಗೆ ಸಾಮಾನ್ಯ ಅಧಿಕಾರ ಪತ್ರದ ಮೂಲಕ ಹಸ್ತಾಂತರಿಸಿದ್ದರು ಎಂದರೆ ಸರಿಯಲ್ಲ. ನಂತರ 1 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪ್ಪಂತೆ 11-ಇ ನಕ್ಷೆ ಮಾಡಿಸಲು ಕಂದಾಯ ಇಲಾಖೆಗೆ 5 ನೇ ಪ್ರತಿವಾದಿ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಂದಾಯ ಇಲಾಖೆಯವರು ಸಾಮಾನ್ಯ ಅಧಿಕಾರ ಪತ್ರದಲ್ಲಿ ನಮೂದಾಗದ ಕಾರಣ ಖಾತೆದಾರರ ಹೆಸರಿನಲ್ಲೇ ಅರ್ಜಿ ಸಲ್ಲಿಸುವಂತೆ 5 ನೇ ಪ್ರತಿವಾದಿಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ 5 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಈ ವಿಚಾರವನ್ನು ತಿಳಿಸಿ ದಿನಾಂಕ 05.12.2010 ರಂದು 1 ನೇ ಪ್ರತಿವಾದಿಯ ಮೂಲಕ ಕಂದಾಯ ಇಲಾಖೆಗೆ 11-ಇ ನಕ್ಷೆ ಮಾಡಿಸಲು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 11-ಇ ನಕ್ಷೆ ಮಾಡಿಸಲು ತಗಲುವ ಖರ್ಚಿನ ಬಾಬ್ತು 10,000/- ರೂಪಾಯಿಯನ್ನು 5 ನೇ ಪ್ರತಿವಾದಿಯೇ ಪಾವತಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸಲ್ಲಿಸಿದ ಅರ್ಜಿಯ ಪ್ರಕಾರ ನಕ್ಷೆ ತಯಾರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 2010 ರಲ್ಲಿ 11-ಇ ನಕ್ಷೆ ಆದರೂ 2007 ರಲ್ಲೇ ದಾವಾ ಸ್ವತ್ತಿನ ಮೇಲಿನ ಹಕ್ಕನ್ನು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಹಸ್ತಾಂತರಿಸಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ

ಅಕ್ಕಪಕ್ಕದಲ್ಲಿ ನಾನು ಖರೀದಿಸಿದ ಸ್ವತ್ತುಗಳಿವೆ ಎಂದರೆ ಸರಿ. ನಾನು ಸರ್ವೇ ನಂ.184, 181 ಮತ್ತು ಇತರೆ ಆಸ್ತಿಗಳನ್ನು ಖರೀದಿಸಿದ್ದೆ ಎಂದರೆ ಸರಿ. ನಾನು ಈ ಸ್ವತ್ತುಗಳಲ್ಲಿ ಲೇಔಟ್ ನಿರ್ಮಾಣ ಮಾಡಿ ಕಂಪನಿ ನಡೆಸುತ್ತಿದ್ದೇನೆ ಎಂದರೆ ಸರಿ.

ನನ್ನ ಕಂಪನಿಗೆ ದಾವಾ ಸ್ವತ್ತಿನ ಅವಶ್ಯಕತೆ ಇದ್ದ ಕಾರಣ 2010 ರಲ್ಲಿ ನಾನು ದಾವಾ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ವಿಚಾರ ತಿಳಿದುಕೊಂಡು ಅವರನ್ನು ಭೇಟಿ ಮಾಡಿದ್ದೆ ಎಂದರೆ ಸರಿ. ಆಗ 1 ರಿಂದ 4 ನೇ ಪ್ರತಿವಾದಿಗಳು 2004 ರಲ್ಲಿ ಆದ ಕ್ರಯದ ಕರಾರು ಹಾಗೂ ಅಧಿಕಾರ ಪತ್ರದ ಬಗ್ಗೆ ನನಗೆ ತಿಳಿಸಿ ಸದರಿ ದಾಖಲೆಗಳ ಜೆರಾಕ್ಸ್ ನಕಲುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತು ನನ್ನ ಕಂಪನಿಗೆ ಬೇಕೇ ಬೇಕು ಎಂಬ ಹಠದಿಂದ 1 ರಿಂದ 4 ನೇ ಪ್ರತಿವಾದಿಗಳಲ್ಲಿ 5 ನೇ ಪ್ರತಿವಾದಿ ಕೊಟ್ಟಂತಹ ಹಣವನ್ನು 5 ನೇ ಪ್ರತಿವಾದಿಗೆ ಹಿಂದಿರುಗಿಸಿ ಅವರಿಂದ ಒಪ್ಪಿಗೆ ಪಡೆದುಕೊಂಡು 1 ರಿಂದ 4 ನೇ ಪ್ರತಿವಾದಿಗಳಿಂದ ಕ್ರಯಪತ್ರ ಮಾಡಿಸಿಕೊಳ್ಳುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಾನು 1 ರಿಂದ 4 ನೇ ಪ್ರತಿವಾದಿಗಳಲ್ಲಿ 5 ನೇ ಪ್ರತಿವಾದಿ ಒಪ್ಪಿಕೊಂಡಿದ್ದಾರೆ ಎಂದು ಸುಳ್ಳು ಹೇಳಿ, 1 ರಿಂದ 4 ನೇ ಪ್ರತಿವಾದಿಗಳಿಂದ ಕ್ರಯದ ಕರಾರು ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು 5 ನೇ ಪ್ರತಿವಾದಿಯ ಜೊತೆ ಯಾವುದೇ ವ್ಯವಹಾರ ಅಥವಾ ಮಾತುಕತೆ ಮಾಡದೇ 1 ರಿಂದ 4 ನೇ ಪ್ರತಿವಾದಿಗಳನ್ನು ನಂಬಿಸಿ ಅವರಿಂದ ಕ್ರಯದ ಕರಾರು ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ವಿಷಯ ತಿಳಿದ ನಂತರ ಈ ಬಗ್ಗೆ 1 ರಿಂದ 4 ನೇ ಪ್ರತಿವಾದಿಗಳು ನನ್ನನ್ನು ವಿಚಾರಿಸಿದ್ದು ನಾನು ಯಾವುದೇ ಸಮಂಜಸ ಉತ್ತರ ನೀಡಿರಲಿಲ್ಲ

ದಿನಾಂಕ : 06.04.2022 ಓ.ಎಸ್ ನಂ.495/2012 ರಲ್ಲಿ
ಪಿ.ಡಬ್ಲ್ಯೂ-1(ಹರೀಶ್ ಪೂನಂ)

ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳು 5ನೇ ಪ್ರತಿವಾದಿಗೆ ಅಧಿಕಾರ ಪತ್ರ ಬರೆದುಕೊಟ್ಟ ನಂತರ ದಿನಾಂಕ 27.12.2010 ರಂದು 5ನೇ ಪ್ರತಿವಾದಿ 6ನೇ ಪ್ರತಿವಾದಿಗೆ ದಾವಾ ಸ್ವತ್ತು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ದಿನಾಂಕ 01.01.2011 ರಂದು ನಾನು 1 ರಿಂದ 4ನೇ ಪ್ರತಿವಾದಿಗಳಿಗೆ ಮೋಸ ಮಾಡಿ ಕ್ರಯದ ಕರಾರು ಬರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕಿಲ್ಲ ಎಂದರೆ ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಪ್ರಧಾನ ಹಿರಿಯ ಸಿವಿಲ್ ಮತ್ತು
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ರಾಮನಗರ.